ಸರ್ಕಾರ ಹಿಂಜರಿಯುವಂಥ ಪ್ರಶ್ನೆಯೇ ಇಲ್ಲ. ರಾಜ್ಯದ ಯಾವುದೇ ಭಾಗದಲ್ಲಿ ಈ ರೀತಿಯ ಘಟನೆಗಳು ನಡೆದಿದ್ದರೆ ಮತ್ತು ಅದರಲ್ಲೂ ಹೆಣ್ಣು ಮಕ್ಕಳುಗಳ ವಿಷಯದಲ್ಲಿ ನಾವೆಲ್ಲಾ ಇವತ್ತು ಅವರಿಗೆ ರಕ್ಷಣೆ ಕೊಡತಕ್ಕಂಥಾದ್ದಕ್ಕೆ ಹೆಣ್ಣು ಮಕ್ಕಳ ಪರವಾಗಿ ಕಾರ್ಯಕ್ರಮಗಳನ್ನು ಕೊಡತಕ್ಕಂಥಾದ್ದಕ್ಕೆ ಕಾಳಜಿಯನ್ನು ವ್ಯಕ್ತಪಡಿಸುತ್ತೇವೆ. ನಾನು ತಮ್ಮ ಮುಖಾಂತರ ಸದನದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಈ ವಿಷಯದಲ್ಲಿ ಯಾವುದೇ ಪ್ರಕರಣಗಳು ಇರಲಿ, ಆ ಪ್ರಕರಣಗಳ ಬಗ್ಗೆ ಕಠಿಣವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಇವತ್ತು ಏನು ಮಾನ್ಯ ಮಾಧುಸ್ವಾಮಿಯವರು, ನವೋದಯ ಶಾಲೆಯ ವಿಷಯವನ್ನು ಏನು ಗಮನಕ್ಕೆ ತಂದಿದ್ದಾರೆ ಆ ವಿಷಯದಲ್ಲೂ ನಾನು ಕ್ರಮವನ್ನು ತೆಗೆದುಕೊಳ್ಳುವುದಾಗಿ ಹೇಳಬಯಸುತ್ತೇನೆ.

7. ಗಮನ ಸೆಳೆಯುವ ಸೂಚನೆ.

ವಿಷಯ: ಮುದ್ದೇಬಿಹಾಳ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ): ಮಾನ್ಯ ಅಧ್ಯಕ್ಷರೆ, ಮುದ್ದೇಬಿಹಾಳ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸಾರ್ವಜನಿಕರು ನಡೆಸುತ್ತಿರುವ ಧರಣಿಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮುದ್ದೇಬಿಹಾಳ ಪಟ್ಟಣದ ಜನ ಸಂಖ್ಯೆಯು 2001ರ ಜನಗಣತಿಯ ಪ್ರಕಾರ 28,235 ಇದ್ದು ಸಧ್ಯದ ಜನಸಂಖ್ಯೆಯು ಸುಮಾರು 30,000 ಇರುತ್ತದೆ. ಸದರಿ ಪಟ್ಟಣಕ್ಕೆ 25,000 ಜನಸಂಖ್ಯೆಗೆ ಪ್ರತಿ ದಿನ 113 ಲೀಟರ್ ನೀರಿನ ಪ್ರಮಾಣಕ್ಕೆ ವಿನ್ಯಾಸಿಸಿ ನಾರಾಯಣಪುರ ಹಿನ್ನೀರಿನ ಮೂಲದ ಯೋಜನೆಯನ್ನು ರೂ. 225.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 1991ರಲ್ಲಿ ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ. 10 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ಮತ್ತು ವಿತರಣಾ ಕೊಳವೆ ಮಾರ್ಗವನ್ನು 2002-03ನೇ ಸಾಲಿನಲ್ಲಿ ಹೊಸ ಬಡಾವಣೆಗಳಲ್ಲಿ ಅಳವಡಿಸಲಾಗಿದೆ.

ಬೆಳೆಯುತ್ತಿರುವ ಜನ ಸಂಖ್ಯೆಯಿಂದ ಸದ್ಯ ಚಾಲ್ತಿಯಲ್ಲಿರುವ ಯೋಜನೆಯಿಂದ ನೀರು ಸರಬರಾಜು ಸಾಕಾಗುತ್ತಿಲ್ಲ ಆದ್ದರಿಂದ 2016ರಲ್ಲಿ ಮುದ್ದೇಬಿಹಾಳ ಪಟ್ಟಣದ ಜನಸಂಖ್ಯೆಯು 43,634 ಎಂದು ಮಧ್ಯಂತರವಾಗಿ ಅಂದಾಜಿಸಿ ಹಾಗೂ 2013ರಲ್ಲಿ ಸದರಿ ಪಟ್ಟಣದ ಜನಸಂಖ್ಯೆಯನ್ನು 62,338 ಎಂದು ಅಂದಾಜಿಸಿ ಪ್ರತ್ಯೇಕ ಯೋಜನೆಯನ್ನು ರೂ. 653.20 ಲಕ್ಷಗಳಿಗೆ ಸಿದ್ಧಪಡಿಸಲಾಗಿದೆ. ಯೋಜನೆಯ ವಿವರ ಈ ಕೆಳಕಂಡಂತಿದೆ.

ಮುದ್ದೇಬಿಹಾಳ ಪಟ್ಟಣದಿಂದ ಸುಮಾರು 3.75 ಕಿ.ಮೀ. ದೂರದಲ್ಲಿರುವ ಮುದ್ನಾಳ್ ಗ್ರಾಮದಲ್ಲಿರುವ ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟ ಕೆರೆಯನ್ನು ಮೂಲವಾಗಿಟ್ಟು ಕೊಂಡು ಪ್ರತಿ ದಿನ ತಲಾ 113 ಲೀಟರ್ ನೀರನ್ನು ಒದಗಿಸಬಹುದಾಗಿದ್ದು, ಈ ಬಗ್ಗೆ ನೀರಾವರಿ ಇಲಾಖೆಯು ಕೆಲವೊಂದು ಷರತ್ತುಗಳನ್ನು ವಿಧಿಸಿ ಸದರಿ ಕೆರೆಯನ್ನು ಕುಡಿಯುವ ನೀರು ಸರಬರಾಜು ಯೋಜನೆಗೆ ಉಪಯೋಗಿಸಿಕೊಳ್ಳಲು ಅನುಮೋದನೆ ನೀಡಿರುತ್ತಾರೆ. ಈ ಯೋಜನೆಯಲ್ಲಿ ಆಲಮಟ್ಟಿ ಎಡದಂಡೆ ಕಾಲುವೆಯಿಂದ 700 ಮಿ. ಮೀ. ವ್ಯಾಸದ ಜೋಡು ಕೊಳವೆ ಸಂಪರ್ಕ ಮಾರ್ಗ ನಿರ್ಮಾಣ, ಹಾಲಿ ಇರುವ ಮುದ್ನಾಳ್ ಕೆರೆಯ ಸಾಮರ್ಥ್ಯವನ್ನು ಹೆಚ್ಚಿಸುವುದು, ಕೆರೆಯಲ್ಲಿ ಜಾಕ್ ವೆಲ್ ನಿರ್ಮಾಣ, 105 ಅಶ್ವ ಶಕ್ತಿಯ ಆಳ ಭಾವಿ ಪಂಪ್‌ಗಳನ್ನು ಅಳವಡಿಸಲು ಅವಕಾಶ ಕಲ್ಪಿಸಿದೆ ಮತ್ತು ಮುದ್ದೇಬಿಹಾಳ ಪಟ್ಟಣದಲ್ಲಿ ಹೊಸದಾಗಿ 454 ದಶಲಕ್ಷ ಲೀ. ಸಾಮರ್ಥ್ಯದ R.C.C. ಮೇಲ್ಮಟ್ಟದ ಜಲಸಂಗ್ರಹಾಗಾರದ ನಿರ್ಮಾಣ ಹಾಲಿ ಶುದ್ಧೀಕರಣ ಘಟಕದ ನವೀಕರಣ ಮತ್ತು ದುರಸ್ತಿ ಹಾಗೂ ಹೊಸ ಬಡಾವಣೆಗಳಿಗೆ ವಿತರಣಾ ವ್ಯವಸ್ಥೆಗೆ ಅವಕಾಶವನ್ನು ಕಲ್ಪಿಸಿದೆ.

ದಿನಾಂಕ : 19-08-2005 ರಂದು ನಡೆದ ಮಂಡಳಿಯ 203ನೇ ಸಭೆಯಲ್ಲಿ ಮುದ್ದೇಬಿಹಾಳ ಪಟ್ಟಣದ ನೀರು ಸರಬರಾಜಿನ ತುರ್ತು ಅಗತ್ಯವನ್ನು ಪೂರೈಸುವ ಮೊದಲನೆ ಹಂತದಲ್ಲಿ 220 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಮತ್ತು 2ನೇ ಹಂತದ ಕಾಮಗಾರಿಗಳನ್ನು 433.20 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ K.M.R.P. (Karnataka Municipal Reforms Projects) ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕೆ ಹಣದ ವಿಷಯದಲ್ಲಿ ಏನು ಪ್ರಸ್ತಾಪ ಇದೆ, ಅದನ್ನು ಆದಷ್ಟು ಬೇಗ ಬಿಡುಗಡೆ ಮಾಡುವುದರ ಮುಖಾಂತರ ಆ ಕೆಲಸವನ್ನು ಮಾಡತಕ್ಕಂಥಾದ್ದಕ್ಕೆ ಚಾಲನೆಯನ್ನು ಕೊಡುತ್ತೇವೆ.

ಶ್ರೀ ಸಿ. ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅಲ್ಲಿ ನಿರಂತರವಾಗಿ ಸುಮಾರು 6 ತಿಂಗಳಿನಿಂದ ಧರಣಿ ನಡೆಯುತ್ತಿದೆ. ಈಗ ಬೇಸಿಗೆ ಕಾಲ ಕುಡಿಯುವ ನೀರಿಗೆ ಹಾಹಾಕಾರ ಇದೆ. 30 ದಿವಸಕ್ಕೊಮ್ಮೆ ಕುಡಿಯುವ ನೀರು ಬಿಡುತ್ತಿದ್ದೇವೆ. ಹೀಗಾಗಿ ಅಲ್ಲಿ ಟ್ಯಾಂಕರ್‌ಗಳನ್ನು ಅಳವಡಿಸಬೇಕು ಅಂತ ಹೇಳಿ ಈಗಾಗಲೇ ಇಲಾಖೆಯವರಿಗೆ ಮತ್ತು ರೆವಿನ್ಯೂ ಅಥಾರಿಟೀಸ್‌ನವರಿಗೆ ಕೇಳಿಕೊಂಡಾಗ ಕೂಡ ಇವತ್ತಿನವರೆಗೂ ಅಲ್ಲಿ ಟ್ಯಾಂಕರ್‌ಗಳ ಏರ್ಪಾಡು ಆಗಿಲ್ಲ. ಆದ್ದರಿಂದ ಕೂಡಲೇ ತುರ್ತಾಗಿ ಜಿಲ್ಲಾಧಿಕಾರಿಗಳಿಗೆ ಮತ್ತು ತಹಶೀಲ್ದಾರ್‌ಗಳಿಗೆ ಹೇಳಿ ಕುಡಿಯುವ ನೀರಿನ ವ್ಯವಸ್ಥೆಗೋಸ್ಕರ 4-5 ಟ್ಯಾಂಕರ್‌ಗಳ ವ್ಯವಸ್ಥೆಯಾದರೂ ಈ ಯೋಜನೆ

ಪೂರ್ತಿಗೊಳಿಸುವುದಕ್ಕಿಂತ ಪೂರ್ವದಲ್ಲಿ ಇದನ್ನಾದರೂ ಮಾಡುವಂತಹ ಆಶ್ವಾಸನೆಯನ್ನು ತಾವು ನೀಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ತಕ್ಷಣ ಟ್ಯಾಂಕರ್‌ಗಳ ಮುಖಾಂತರ ನೀರನ್ನು ಒದಗಿಸತಕ್ಕಂಥಾದ್ದಕ್ಕೆ ಸರ್ಕಾರ ತೀರ್ಮಾನ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ಜಿಲ್ಲಾಧಿಕಾರಿಗಳಿಗೆ ನಾನು ಸೂಚನೆಯನ್ನು ಕೊಡುತ್ತೇನೆ. ಇದರ ಜೊತೆಗೆ ನಾನು ಈ ವಿಷಯದಲ್ಲಿ ನಿನ್ನೆ ಚರ್ಚೆ ಮಾಡಿದ್ದೇನೆ. ಎರಡೂವರೆ ಕೋಟಿ ರೂಪಾಯಿಗಳ ತುರ್ತು ಅನುದಾನದ ಅವಶ್ಯಕತೆ ಇದೆ ಅಂತ ಏನು ಹೇಳಿದ್ದಾರೆ ಆ ಹಣವನ್ನು ಬಿಡುಗಡೆ ಮಾಡಿಸುವುದರ ಮುಖಾಂತರ ಆದಷ್ಟು ಆ ಒಂದು ಶಾಶ್ವತವಾದ ಕಾಮಗಾರಿಯನ್ನು ಸಂಪೂರ್ಣಗೊಳಿತಕ್ಕಂಥಾದ್ದಕ್ಕೆ ಸರ್ಕಾರ ತೀರ್ಮಾನವನ್ನು ಮಾಡುತ್ತದೆ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ: (ಅ) ತಹಸೀಲ್ದಾರ್ ನೇಮಕದ ಬಗ್ಗೆ ಅರ್ಧಗಂಟೆ ಕಾಲಾವಕಾಶ ಕೋರಿಕೆ.

ಅಧ್ಯಕ್ಷರು : ಶ್ರೀ ಎ. ಟಿ. ರಾಮಸ್ವಾಮಿಯವರೇ . . . . .

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಲ್ಲಿ ಮತ್ತು ಮಾನ್ಯ ಸಭಾನಾಯಕರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಈಗ ಈ ತಹಶೀಲ್ದಾರ್‌ರ ನೇಮಕಾತಿ ಏನು ವಿಳಂಬವಾಗುತ್ತಿದೆ. ಸರಿಯಾಗಿ ನಿಷ್ಪೆ ಇರತಕ್ಕಂಥ, ಸರಿಯಾದ ಬದ್ಧತೆ ಇರತಕ್ಕಂಥ ಅಧಿಕಾರಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡದೇ ಇದ್ದರೆ ಸರ್ಕಾರ ಎಷ್ಟೇ ಕಾರ್ಯಕ್ರಮಗಳನ್ನು ರೂಪಿಸಿದರೂ ಕೂಡ ಆ ಅಭಿವೃದ್ಧಿ ಆ ಜನರಿಗೆ ಮುಟ್ಟುವುದಿಲ್ಲ. ಆದ್ದರಿಂದ ಈ ವಿಷಯವನ್ನು ಬಹಳ ವಿಸ್ತೃತವಾಫಿ ಚರ್ಚೆ ಮಾಡಬೇಕಾಗುತ್ತದೆ ಆದ್ದರಿಂದ ಈ ವಿಷಯವನ್ನು ಅರ್ಧ ಗಂಟೆಗಳ ಕಾಲದ ಚರ್ಚೆಗೆ ಇದನ್ನು ಪರಿವರ್ತನೆ ಮಾಡಿಕೊಡಿ ಎಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿ. ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ನಾನೂ ಸಹ ಈ ವಿಷಯವನ್ನು ಕಳುಹಿಸಿದ್ದೇನೆ ಇದು ಬಹಳ ಗಂಭೀರವಾದ ವಿಷಯ ಇದನ್ನು ಅರ್ಧಗಂಟೆ ಕಾಲದ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಎ.ಟಿ. ರಾಮಸ್ವಾಮಿಯವರು ಈ ವಿಷಯವನ್ನು ಚರ್ಚೆ ಮಾಡಲು ಅರ್ಧ ಗಂಟೆ ಕಾಲ ಚರ್ಚೆಗೆ ಕೇಳುತ್ತಿದ್ದಾರೆ ಅದಕ್ಕೆ ಮಾಡಿಕೊಡಬಹುದು ಮಾನ್ಯ ಅಧ್ಯಕ್ಷರೆ,